**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ**284/2017**

ಸಿ.ಡಬ್ಲ್ಯೂ –16 ಪಿ.ಡಬ್ಲ್ಯೂ-6

| | | |
|---|---|---|
| ಹೆಸರು | ಃ | ಸಲಿಂ |
| ತಂದೆಃಗಂಡ | ಃ | ಅಲ್ಲಾಹುದ್ದೀನ್ ನದಾಫ |
| ವಯಸ್ಸು | ಃ | ೩೭ ವರ್ಷ |
| ಉದ್ಯೋಗ | : | ಚಾಲಕ |
| ವಾಸಸ್ಥಳ | ಃ | ಲಾಡ ಚಿಂಚೋಳಿ |

ದಿನಾಂಕಃ ೦೫-೧೧-೨೦೨೧

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಚಾಸಾ-೧೬ ರವರ ಪರಿಚಯ ಇರುತ್ತದೆ. ಈ ಕೇಸಿನ ಬಗ್ಗೆ ನನಗೆ ಏನು ಮಾಹಿತಿ ಇಲ್ಲ, ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ಈಗ ೪ ವರ್ಷದ ಹಿಂದೆ ಪೋಲಿಸರು ಒಂದು ದಾಖಲೆಯ ಮೇಲೆ ನನ್ನ ಹೆಬ್ಬೆಟ್ಟಿನ ಗುರುತನ್ನು ಪಡೆದಿದ್ದಾರೆ. ಸಾಕ್ಷಿಯು ಸದರಿ ದಾಖಲೆಯನ್ನು ಗುರುತಿಸಿದ್ದು ಅದು ಗುನ್ನಾ ಪಂಚನಾಮೆ ಮೇಲೆ ಇರುತ್ತದೆ. ಸದರಿ ಪಂಚನಾಮೆಯನ್ನು ಅದನ್ನು ನಿಪಿ-೧೧ ಎಂದು ಈಗಾಗಲೇ ಗುರುತಿಸಲಾಗಿದೆ. ಅದರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ.

**ಪಾಟೀ ಸವಾಲು ಮಾನ್ಯ ಸಸಅ ಅವರಿಂದಃ**

ದಿ.೨೦-೦೭-೨೦೧೬ ರಂದು ಬೆಳಿಗ್ಗೆ ೧೦.೦೦ ಗಂಟೆ ಸುಮಾರಿಗೆ ನನ್ನನ್ನು ಮತ್ತು ಚಾಸಾ-೧೬ ರವರನ್ನು ಘಟನಾ ಸ್ಥಳವಾದ ಕಲಬುರಗಿಗೆ ಕಡೆಗೆ ಹೋಗುವ ರಾಜ್ಯ ಹೆದ್ದಾರಿಯ ಡೋಗಿ ನಾಲಾ ಬ್ರಿಜ್ ಹತ್ತಿರ ಪೋಲಿಸರು ನನ್ನನ್ನು ಕರೆಸಿರುತ್ತಾರೆ ಎಂದರೆ ಸರಿಯಲ್ಲ. ಸ್ಥಳವನ್ನು ಚಾಸಾ-೨೩ ರವರು ತೋರಿಸಿದಂತೆ ಘಟನಾ ಸ್ದಳದ ಪಂಚನಾಮೆಯನ್ನು ನಿಪಿ-೧೧ ರಂತೆ ಬೆಳಿಗ್ಗೆ ೧೦.೦೦ ರಿಂದ ೧೧.೦೦ ಗಂಟೆಯ ಸಮಯದಲ್ಲಿ ಮಾಡಿರುತ್ತೆವೆ ಎಂದರೆ ಸರಿಯಲ್ಲ. ಸ್ದಳದಲ್ಲಿ ನಿಪಿ-೧೧ ರಂತೆ ಪಂಚನಾಮೆ ಬರೆದು ನಮ್ಮ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಪರಿಚಯರವರಾಗಿದ್ದು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ.

**<u>ಪಾ. ಸವಾಲು ಆರೋಪಿಗಳ ಪರ ವಕೀಲರಿಂದಃ</u>**

ಇಲ್ಲ ಎಂದು ಹೇಳುತ್ತಾರೆ.

**<u>ಮರುವಿಚಾರಣೆಃ</u>-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ.ಸಿ. ಆಳಂದ.